ಪ. ರಾಮಕೃಷ್ಣ ಶಾಸ್ತ್ರಿ

# ಸ್ವರ್ಗಕ್ಕೆ ಹೋದ ಬಡಗಿ

ಹಳ್ಳಿಯೊಂದರಲ್ಲಿ ಗೆಂಡೊಂಗ್ ಎಂಬ ನಿಪುಣನಾದ ಬಡಗಿ ಇದ್ದ. ಮರದಿಂದ ಸುಂದರವಾದ ಕಲಾಕೃತಿಗಳನ್ನು, ಮನೆಗಳನ್ನು ನಿರ್ಮಿಸಿ ಹೆಸರು ಗಳಿಸಿದ್ದ. ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದು ಅವನ ಜಾಯಮಾನ. ತಾನು ನಿತ್ಯವೂ ಗಳಿಸುವ ಹಣದಲ್ಲಿ ಮನೆಯ ಖರ್ಚಿಗೆ ಉಳಿಸಿಕೊಂಡು ಮಿಕ್ಕಿದನ್ನು ದಾನ, ಧರ್ಮ ಮಾಡುತ್ತಿದ್ದ. ಅವನ ನೆರೆಯಲ್ಲಿ ಸ್ನಾಲೊಂಗ್ ಎಂಬ ಚಿತ್ರಕಾರನಿದ್ದ. ಮನ ಸೆಳೆಯುವ ವರ್ಣ ಚಿತ್ರಗಳನ್ನು ಬರೆಯುವ ಕಲೆ ಅವನಿಗೆ ಗೊತ್ತಿತ್ತು. ಆದರೆ ಶುದ್ಧ ಸೋಮಾರಿಯಾದ ಆತ ಒಂದು ದಿನವೂ ಚಿತ್ರ ಬರೆಯುತ್ತಿರಲಿಲ್ಲ. ಪ್ರತಿದಿನವೂ ಗೆಂಡೊಂಗ್ ಮನೆಗೆ ಬರುತ್ತಿದ್ದ. ಅವನ ಬಳಿ ಹಣ ಕೇಳುತ್ತಿದ್ದ. ಅದರಲ್ಲಿ ತಿಂದು, ಕುಡಿದು ಮಜಾ ಮಾಡುತ್ತಿದ್ದ.

ಹೀಗೆ ಪ್ರತಿದಿನವೂ ತನ್ನಿಂದ ಹಣ ಪಡೆದುಕೊಂಡು ಹೋಗಿ ಸ್ನಾಲೊಂಗ್ ಬದುಕುತ್ತಿರುವುದು ಕಂಡು ಬಡಗಿಗೆ ಒಮ್ಮೆ ತಾಳ್ಮೆ ತಪ್ಪಿತು. 'ಅಣ್ಣ, ನಿನಗೆ ದೇವರು ಕೊಟ್ಟ ಕೈ ಕಾಲುಗಳು ಚೆನ್ನಾಗಿಯೇ ಇವೆ, ಚಿತ್ರ ಬರೆಯುವ ಕೌಶಲವೂ ಇದೆ. ಹೀಗಿರುವಾಗ ಯಾರೋ ಅಂಗವಿಲ್ಲದವರಿಗೆ ನೆರವಾಗುವ ನನ್ನ ಹಣದಿಂದಲೇ ಯಾಕೆ ಬದುಕುತ್ತಿರುವೆ? ನಿನ್ನ ಕಲೆಯನ್ನು ಉಪಯೋಗಿಸಿ ಬದುಕಬಾರದೆ?' ಎಂದು ವಿನಯದಿಂದ ಕೇಳಿದ. ಈ ಮಾತಿನಿಂದ ಕಲಾವಿದನಿಗೆ ಕೋಪ ಬಂತು. 'ಓಹೋ, ನಿನಗೆ ಹಣ ಕೊಡಲು ಇಷ್ಟವಿಲ್ಲ ತಾನೆ? ಆಗಲಿ, ನನ್ನ ಕಲೆಯ ಮಹತ್ವವೇನೆಂಬುದನ್ನು ನಿನಗೆ ಒಂದೆರಡು ದಿನಗಳಲ್ಲಿ ತೋರಿಸಿ ಕೊಡುತ್ತೇನೆ' ಎಂದು ಹೇಳಿದ.

ಹೀಗೆ ಹೇಳಿ ಸ್ನಾಲೊಂಗ್ ಸುಮ್ಮನಿರಲಿಲ್ಲ. ಆ ದೇಶದ ದೊರೆ ಕೆಲವು ದಿನಗಳ ಹಿಂದೆ ತೀರಿಕೊಂಡಿದ್ದ. ಅವನ ಮಗ ಪಟ್ಟವೇರಿದ್ದ. ಹೊಸ ದೊರೆ ಬುದ್ಧಿವಂತನಾಗಿರಲಿಲ್ಲ. ವಿವೇಕವಂತನೂ ಅಲ್ಲ. ಯಾರಾದರೂ ಏನಾದರೂ ಹೇಳಿದರೆ ವಿಮರ್ಶೆ ಮಾಡದೆ ನಂಬುತ್ತಿದ್ದ. ಸ್ನಾಲೊಂಗ್ ಗತಿಸಿದ ದೊರೆಯ ಸುಂದರ ವರ್ಣಚಿತ್ರವನ್ನು ಬರೆದ. ಅದರ ಕೆಳಗೆ ದೊರೆಯ ಕೈಬರಹವನ್ನು ಅನುಕರಿಸಿ ಒಂದು ಲೇಖನವನ್ನೂ ಸೇರಿಸಿದ. ಇದನ್ನು ತೆಗೆದುಕೊಂಡು ಹೋಗಿ ಹೊಸ ದೊರೆಗೆ ಕಾಣಿಕೆಯಾಗಿ ನೀಡಿದ. ದೊರೆ ಚಿತ್ರವನ್ನು ತುಂಬ ಮೆಚ್ಚಿಕೊಂಡ. 'ವ್ಹಾವ್! ಇದು ನನ್ನ ತಂದೆ ಎದ್ದು ಬರುವಂತೆ ಕಾಣಿಸುವ ನೈಜ ಚಿತ್ರ. ಯಾರು ನೀನು, ಎಲ್ಲಿಂದ ಬರುತ್ತಿರುವೆ?' ಎಂದು ಕೇಳಿದ.

ಸ್ನಾಲೊಂಗ್ ಕಣ್ಣೀರು ಮಿಡಿದ. 'ದೊರೆಯೇ, ನಿಮ್ಮ ತಂದೆ ನಿಧನರಾಗಿ ಸ್ವರ್ಗಕ್ಕೆ ಹೋಗುವ ದಿನ ನಾನೂ ತೀರಿಕೊಂಡು ಅವರ ಜೊತೆಯಲ್ಲೇ ಸ್ವರ್ಗ ಸೇರಿದೆ. ಅಲ್ಲಿ ಅವರ ಈ ಚಿತ್ರವನ್ನು ರಚಿಸಿ ಕಾಣಿಕೆಯಾಗಿ ನೀಡಿದೆ. ಚಿತ್ರ ನೋಡಿ ಮೆಚ್ಚಿಕೊಂಡರು. ಆದರೆ ದುಃಖಪಟ್ಟರು. ಈ ಚಿತ್ರವನ್ನಿಡಲು ಇಲ್ಲಿ ಒಳ್ಳೆಯ ಭವನಗಳಿಲ್ಲ. ಸ್ವರ್ಗದಲ್ಲಿ ಒಂದು ಚಿತ್ರಕಲಾ ಭವನ ಬೇಕು. ಆದರೆ ಇದನ್ನು ರಚಿಸಲು ಒಬ್ಬ ಬಡಗಿಯೂ ಇಲ್ಲಿ ಇಲ್ಲ. ನೀನು ಈಗಲೇ ಭೂಮಿಗೆ ಹೋಗಿ ರಾಜನಾದ ನನ್ನ ಮಗನೊಂದಿಗೆ ಓರ್ವ ಬಡಗಿಯನ್ನು ಕಳುಹಿಸಲು ಹೇಳುತ್ತೀಯಾ? ಎಂದು ಕೇಳಿ ನನ್ನನ್ನಿಲ್ಲಿಗೆ ಕಳುಹಿಸಿದ್ದಾರೆ. ನೋಡಿ ಈ ಚಿತ್ರದ ಕೆಳಗೆ ಅವರೇ ಬರೆದ ವಿನಂತಿಯ ಪತ್ರವಿದೆ' ಎಂದು ಹೇಳಿದ.